ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೇ ನನ್ನದೊಂದು ಪ್ರಶ್ನೆಯನ್ನು ತಡೆಹಿಡಿದಿದ್ದೀರಿ. ಈಗ ಮಂತ್ರಿಗಳು ಇಲ್ಲಿದ್ದಾರೆ.

ಅಧ್ಯಕ್ಷರು: ತಡೆಹಿಡಿದಿರುವ ಪ್ರಶ್ನೆಗಳಿಗೆ ಸುಮಾರು 10-15 ಉತ್ತರಗಳು ರೆಡಿ ಇವೆ. ಸೋಮವಾರದಿಂದ ಪ್ರತಿದಿವಸ ಅದನ್ನು ತೆಗೆದುಕೊಳ್ಳೋಣ. ಈಗೊಂದು ಪ್ರಕಟಣೆ ಇದೆ.

3. ಪ್ರಕಟಣೆ

ಮಾನ್ಯ ಸಭಾಧ್ಯಕ್ಷರು:

ವಿಧಾನಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಕೆಳಕಂಡ ಸಂದೇಶವು ಬಂದಿರುತ್ತದೆ.

ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 118ರ ಮೇರೆಗೆ ದಿನಾಂಕ 19-04-2000 ದಂದು ವಿಧಾನಪರಿಷತ್ತು 'ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ವಿಧೇಯಕ, 2000' ವನ್ನು ತಿದ್ದುಪಡಿಗಳೊಂದಿಗೆ ಅಂಗೀಕರಿಸಿದ್ದು, ವಿಧಾನಸಭೆಯ ಸಹಮತಿಯನ್ನು ನೀಡಬೇಕೆಂದು ಕೋರಿರುತ್ತಾರೆ.

4. ಅಧ್ಯಕ್ಷರ ಅಪ್ಪಣೆ ಮೇರೆಗೆ: ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆ ಮುಂದುವರಿಸುವ ಬಗ್ಗೆ:

ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಗೆ ನಮಗೆ ಸಮಯ ಹೆಚ್ಚಾಗಿ ಬೇಕಾಗಿರುವುದರಿಂದ ಇವತ್ತು ನಾನು ಯಾವುದೇ ಶೂನ್ಯವೇಳೆಯನ್ನು ತೆಗೆದುಕೊಳ್ಳುವುದಿಲ್ಲ. ಶೂನ್ಯ ವೇಳೆಗೆ ಸಂಬಂಧಿಸಿದಂತೆ ಬೇಕಾದಷ್ಟು ಬಂದಿವೆ. ಅದಕ್ಕೆ ಉತ್ತರಗಳೂ ಬಂದಿವೆ. ಅವುಗಳನ್ನು ಸೋಮವಾರದಿಂದ ದಿನವೂ ಐದೈದು ಹಾಕಿಕೊಂಡು ಮಾಡೋಣ. ಈಗ ರಾಜ್ಯಪಾಲರ ಭಾಷಣದ ಬಗ್ಗೆ ಚರ್ಚೆ ಶುರುಮಾಡಬೇಕು.

+ಶ್ರೀ ಜಗದೀಶ್ ಶೆಟ್ಟರ್: (ಮಾನ್ಯ ವಿರೋಧ ಪಕ್ಷದ ನಾಯಕರು) ಇವತ್ತು ನಿಯಮ 69 ಕೂಡ ಇದೆ. ಅದು ಕುಡಿಯುವ ನೀರಿನ ಬಗ್ಗೆ ಸಂಬಂಧಿಸಿದ್ದು ರಾಜ್ಯಪಾಲರ ಭಾಷಣದ ಬಗ್ಗೆ ಚರ್ಚೆ ಒಂದು ಸಾರಿ ಪ್ರಾರಂಭವಾದರೆ ಅದಕ್ಕೆ ಮುಕ್ತಾಯವಿಲ್ಲ. ನಿಯಮ 69ರ ಬಗ್ಗೆ ಕುಡಿಯುವ ನೀರಿಗೆ ಸಂಬಂಧಿಸಿದಂತಹ ವಿಷಯಕ್ಕೆ ಅವಕಾಶ ಇಲ್ಲದಂತಾಗುತ್ತದೆ.

MR. Speaker: It is not good on our part if we delay the discussion on the Governor's Address.

ನಿನ್ನೆ ತಾವು ಮತ್ತು ಮಾನ್ಯ ಕಾಗೋಡು ತಿಮ್ಮಪ್ಪನವರು ಮಾನ್ಯ ಸಿಂಧ್ಯಾರವರು ಒಳಗಡೆ ಹೋಗಿ ಮಾತನಾಡಿಕೊಂಡು ಬಂದಿದ್ದೀರಿ, ಇವತ್ತು ರಾಜ್ಯಪಾಲರ ಭಾಷಣ ತೆಗೆದುಕೊಳ್ಳೋಣ ಎಂದು ತೀರ್ಮಾನವಾಗಿದೆ.

ಶ್ರೀ ಜಗದೀಶ್ ಶೆಟ್ಟರ್: ಈಗ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಚರ್ಚೆಯನ್ನು ಪ್ರಾರಂಭ ಮಾಡಿ, ಅದನ್ನು ಮುಗಿಸಿದಮೇಲೆ ಮಾನ್ಯ ರಾಜ್ಯಪಾಲರ ಭಾಷಣದ ಬಗ್ಗೆ ಚರ್ಚೆಯನ್ನು ತೆಗೆದುಕೊಳ್ಳಿ.

ಅಧ್ಯಕ್ಷರು: ಅದನ್ನು ನೀವು ಮುಗಿಸುವುದಿಲ್ಲ. ಈ ಕುಡಿಯುವ ನೀರಿನ ಸಮಸ್ಯೆ ಎಂದರೆ ಕಡಿಮೆ ಎಂದರೂ 50 ಜನರು ಮಾತನಾಡುತ್ತಾರೆ. ನಾನು ಅದಕ್ಕಾಗಿ ಯಾರನ್ನೂ ತಡೆಹಿಡಿಯುವುದಕ್ಕಾಗುವುದಿಲ್ಲ.